4	ಕ್ವಾರ ಟೌನ್	136/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ
5	ಅಂಕೋಲ	193/04 ಕಲಂ 392, 511 ಐಪಿಸಿ	ಉದಯ್	ಪಿ.ಟಿ

ಆಭರಣ ತಯಾರಕರಾದ ದಿವಾಕರ್ ಕಾಲು ರೇವಣಕರ್‌ರವರನ್ನು ಸಿದ್ದಾಪುರ ಪೊಲೀಸ್ ಠಾಣೆ ಮೊ.ಸಂ. 8/04: 457,380 ಐಪಿಸಿ ಪ್ರಕರಣಕ್ಕೆ ಸಂಬಂದಿಸಿದಂತೆ ಕರೆಯಿಸಿ ಪ್ರಶ್ನಿಸಲಾಗಿ ಈತನು ಮುಗ್ಧನಾಗಿರುತ್ತಾನೆ.

ಇ) ಮುಗ್ದ ಆಭರಣ ತಯಾರಕರನ್ನು ಆರೋಪಿತರನ್ನಾಗಿ ಮಾಡಿ ಠಾಣೆಗೆ ಎಳೆದು ತಂದು ಹಿಂಸಿಸಿದ ಪ್ರಕರಣಗಳು ಇದುವರೆವಿಗೂ ವರದಿಯಾಗಿರುವುದಿಲ್ಲ. ಇಂತಹ ಪ್ರಕರಣಗಳು ವರದಿಯಾದಲ್ಲಿ ಕೆಎಸ್‌ಪಿ(ಡಿ.ಪಿ) ರೂಲ್ಸ್ ರನ್ವಯ ಕ್ರಮ ಕೈಗೊಳ್ಳಲಾಗುವುದು.

930(844) ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೀನುಗಾರಿಕಾ ರಸ್ತೆಗಳೆಷ್ಟು?

ಆ) ಅತಿವೃಷ್ಟಿಯಿಂದ ಈ ರಸ್ತೆಗಳು ತೀರಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇವುಗಳ ದುರಸ್ತಿ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 20 ಮೀನುಗಾರಿಕಾ ರಸ್ತೆಗಳು ಇರುತ್ತವೆ. ಅಲ್ಲದೆ, ನಬಾರ್ಡ್ ಯೋಜನೆಯಡಿ 7 ಮೀನುಗಾರಿಕಾ ರಸ್ತೆಗಳನ್ನು ನಿರ್ಮಿಸಲಾಗಿದೆ.

ಆ) ಹೌದು.

ಮಳೆಗಾಲದಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಅನುದಾನದ ಕೊರತೆಯಿಂದಾಗಿ ರಸ್ತೆಗಳನ್ನು ದುರಸ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿಗಾಗಿ ಹೆಚ್ಚುವರಿ ಅನುದಾನದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

931(1499) ಶ್ರೀ ಕೆ. ಗೋಪಾಲ ಪೂಜಾರಿ(ಬೈಂದೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪಂಪಿಂಗ್ ಸ್ಟೇಷನ್‌ಗಳೆಷ್ಟು, (ವಿವರ ನೀಡುವುದು)

ಆ) ಜಲ ಮಂಡಳಿ ವ್ಯಾಪ್ತಿಯ ಬೆಂಗಳೂರು ನಗರದಲ್ಲಿ ಎಷ್ಟು ಪಂಪಿಂಗ್ ಸ್ಟೇಷನ್‌ಗಳಿವೆ.